Regd No B C 155 8-2-1970

SATYAVADI Daily, MYSORE 4 ★ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಮಾರ್ಚ್ 2 ರಂದು ಬೊಂಬಾಯಿ ಬಂದ್‌ಗೆ ಕರೆಕೊಡಲಾಗಿದೆ

ಹಾಲು ಪುಡಿ ವಶ

ಹೈದರಾಬಾದು— ವಿಜಯವಾಡದಿಂದ ಮದ್ರಾಸಿಗೆ ಸಾಗಿಸಲಾಗುತ್ತಿದ್ದ ದಾನದ ಹಾಲುಪುಡಿ 72 ಚೀಲವನ್ನು ವಶಪಡಿಸಿಕೊಳ್ಳಲಾಯಿತು.

★

ಡಿಎಂಕೆ ಮೇಲೆ ಆರೋಪ

ಸೇಲಂ— ಡಿಎಂಕೆ ಹಿಂದಿ ವಿರೋಧ ಕಾರ್ಯವು ಒಂದು ಪ್ರಚಾರ ತಂತ್ರ ಮತ್ತು ರಾಜಕೀಯ ಕಳ್ಳಾಟ ಎಂದು ಕಾಮರಾಜರು ವಿವರಿಸಿದರು.

○

ಜಾಕ್‌ಪಾಟ್

ಬೊಂಬಾಯಿ— ನಿನ್ನೇ ಕುದುರೆ ಜೂಜಿನಲ್ಲಿ ಜಾಕ್‌ಪಾಟ್‌ನಲ್ಲಿ ಶೇಖರಿಸಲಾಗಿದ್ದ ರೂ 699530 ವಿಶ್ವದ ದಾಖಲೆ ಎನ್ನಬಹುದು – ಹಂಚಿಕೆಗೆ ದೊರೆತ ರೂ ರೂ. 4862144 ಜಾಕ್‌ಪಾಟ್ ಗೆದ್ದ ಟಿಕೀಟು ಹೊಂದಿದ್ದ 4 ಮಂದಿಗೆ ತಲಾ ರೂ 1217204 ದೊರೆಯಿತು.

○

ತನಿಖೆ

ಕಲ್ಕತ್ತಾ— ಉಪ ಮುಖ್ಯ ಮಂತ್ರಿ ಜ್ಯೋತಿ ಬಾಸು ಆಡಳಿತದಲ್ಲಿರುವ ಗೃಹ ಸಚಿವಾಲಯವು ಕಳೆದ 11 ತಿಂಗಳಿಂದ ವಾಪಸ್ಸು ತೆಗೆದುಕೊಂಡಿರುವ 1300 ಕೋರ್ಟು ಮೊಖದ್ದಮೆಗಳ ರೆಕಾರ್ಡುಗಳನ್ನು ತನಿಖೆಗಾಗಿ ಮುಖ್ಯ ಮಂತ್ರಿ ಶ್ರೀ ಅಜ್ಯಾ ಮುಖರ್ಜಿ ಕರೆಸಿರುವರು.

●

ನವದೆಹಲಿ— ಕಳೆದ ಕೆಲವು ವರ್ಷಗಳಿಂದ ಭಾರತದ ಸಿಗರೇಟು ಮತ್ತು ಬೀಡಿಗಳ ರಫ್ತು ಕಡಮೆಯಾಗಿದೆಯೆಂದು ವಿದೇಶಿ ವ್ಯಾಪಾರ ಸಚಿವಾಲಯ ತಿಳಿಸಿದೆ.

ಬಜೆಟ್ ಮಂಡನೆ

ನವದೆಹಲಿ— 70-71 ರ ರೈಲ್ವೇ ಬಜೆಟ್ಟನ್ನು ಫೆಬ್ರವರಿ 23 ರಂದು, ಜನರಲ್ ಬಜೆಟ್ ಫೆಬ್ರವರಿ 28 ರಂದು ಪಾರ್ಲಿಮೆಂಟಿನಲ್ಲಿ ಮಂಡಿಸಲಾಗುವುದು – ರಾಷ್ಟ್ರಾಧ್ಯಕ್ಷ ಗಿರಿಯವರು ಬಜೆಟ್ ಅಧಿವೇಶನದ ಪ್ರಾರಂಭವನ್ನು ಫೆಬ್ರವರಿ 20 ರಂದು ನೆರವೇರಿಸುವರು.

★

ಗಡಿ ಗುರ್ತು

ಚಂಡೀಘರ್ – ಪಂಜಾಬು, ಹರಯಾಣ ಮತ್ತು ಹಿಮಾಚಲ ಪ್ರದೇಶಗಳ ಹೊಸ ಗಡಿ ಗುರ್ತು ಹಾಕಲು ಉನ್ನತ ಮಟ್ಟದ ಸಮಿತಿ ರಚಿಸಲು ಪಂಜಾಬಿನ ವಿರೋಧ ಕಾಂಗ್ರೆಸ್ ಕೇಳಿಕೆಹಾಕಿದೆ.

★

ಅಗ್ನಿ ಅನಾಹುತ

ಷಿಲಾಂಗ್— ಪಟ್ಟಣದ ಅತಿ ಚಟುವಟಿಕೆ ಸ್ಥಳವಾದ ಬುರಾ ಬಜಾರ್‌ನಲ್ಲಿ ಅಗ್ನಿ ಅನಾಹುತದಿಂದ ಲಕ್ಷಾಂತರ ರೂಪಾಯಿಗಳ ಆಸ್ತಿ ಸುಟ್ಟು ಬೂದಿಯಾಯಿತು.

○

ಕುದುರೆ ಪ್ರದರ್ಶನ

ನವದೆಹಲಿ — ಇದೇ ಫೆಬ್ರವರಿ 13 ರಿಂದ ದೆಹಲಿಯ ದಂಡು ಪ್ರದೇಶದಲ್ಲಿ ದೆಹಲಿ ಕುದುರೆ ಪ್ರದರ್ಶನ ನಡೆಯುವುದು: ಈ ಪ್ರದರ್ಶನದ ನಂತರ ಕೆಂಪು ಕೋಟೆ ಮೈದಾನದಲ್ಲಿ ದೆಹಲಿ ಕುದುರೆಗಳ ಪ್ರದರ್ಶನ ನಾಲ್ಕು ದಿನಗಳು ನಡೆಯುವುದು

●

ಗಾಂಧೀಜಿ ಅಮೃತವಾಣಿ

ಲೋಕದ ಸಕಲ ಜೀವಿಗಳೊಂದಿಗೆ ಸ್ನೇಹದಿಂದಿರುವುದೇ ನನ್ನ ಗುರಿ.

ಕಾಟ್ಟಾಲರ ಬಂಧನ

ಬೆಂಗಳೂರು— ನಿನ್ನೆ ಚಿಕ್ಕ ಲಾಲಬಾಗಿನಲ್ಲಿ ಏರ್ಪಡಿಸಲಾಗಿದ್ದ ಬಹಿರಂಗ ಸಭೆಯಲ್ಲಿ ಭಾಷಣ ಮಾಡಲಿದ್ದ ಶ್ರೀ ವಾಟಾಳ ನಾಗರಾಜ್ ಮತ್ತು ಅವರ ಜೊತೆಗಾರ ಸಂಸಂಗಿಯರನ್ನು ಮನ್ನೆ ಚರಿಕೆಯಿಂದ ಬಂಧಿಸಲಾಗಿತ್ತು – ಸಭಾಸ್ಥಾನದಲ್ಲಿ ಸೇರಿದ್ದ ಜನರನುಚರುರಿಸಿದ ಪೋಲೀಸರ ಮೇಲೆ ಕಲ್ಲು ತೂರಲಾಯಿತು – ಕೆಲವು ಕಡೆ ಕಲ್ಲು ಎಸೆತವಿತ್ತು – ತೊಂದರೆ ಸ್ಥಳಗಳಲ್ಲಿ ಪೋಲೀಸು ಉಸ್ತುವಾರಿ ಏರ್ಪಡಿಸಲಾಗಿದೆ.

○

ರಾಯಭಾರಿ ಪತ್ನಿ ಕೊಲೆ

ಕಲ್ಕತ್ತಾ— ಫ್ರಾನ್ಸಿನ ರಾಯಭಾರಿಯರ ಪತ್ನಿ ಶ್ರೀಮತಿ ಬಿಸಟಿಯರನ್ನು ಅವರ ಮನೆಯಲ್ಲಿ ಯಾರೋ ದುರಾತ್ಮನು ತಿವಿದು ಸಾಯಿಸಿರುವನು – ತೀವ್ರ ಗಾಯಗೊಳಿಸಲ್ಪಟ್ಟ ರಾಯಭಾರಿಯವರೂ ಅವರ ಪುತ್ರನೂ ಆಸ್ಪತ್ರೆಗೆ ಸಾಗಿಸಲ್ಪಟ್ಟರು.

★

ಅತೀ ತೀಕ್ಷ್ಣವಾಗಿಲ್ಲ

ಭುವನೇಶ್ವರ— ಭಾರತದ ರಾಜಕೀಯ ಪರಿಸ್ಥಿತಿ ತೀಕ್ಷ್ಣವಾಗಿದ್ದರೂ, ಅತೀ ಹೆಚ್ಚು ತೀಕ್ಷ್ಣವಾಗಿಲ್ಲವೆಂದು ಅಮೇರಿಕಾ ರಾಯಭಾರಿ ಕೆನೆತ್ ಕೀಟಿಂಗ್ಸ್ ಹೇಳಿದರು

○

ನಿಜಲಿಂಗಪ್ಪನವರ ಮೇಲೆ ಆರೋಪ

ಬೆಂಗಳೂರು— ಹಳೇ ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರು ಫರಿದಾಬಾದಿನ ಅಧ್ಯಕ್ಷ ಭಾಷಣವನ್ನು ಪಾರ್ಟಿ ರೂಲ್ಸು ಪ್ರಕಾರ ಮುಂಚಿತವಾಗಿ ಪ್ರಧಾನಿಯವರಿಗೆ ತೋರಿಸಲಿಲ್ಲವೆಂದು ಹೊಸ ಕಾಂಗ್ರೆಸ್ ಯುವಕರು ಆಪಾದಿಸಿರುವರು.

★

ಗಡಿ ವ್ಯಾಜ್ಯ ವ್ಯವಸ್ಥೆಗೆ ಒತ್ತಾಯ

ಬೊಂಬಾಯಿ— ಮಹಾರಾಷ್ಟ್ರ–ಮೈಸೂರು ಗಡಿ ವ್ಯಾಜ್ಯದ ಶೀಘ್ರ ವ್ಯವಸ್ಥೆಗೆ ಮಾಡಲು ಮಾರ್ಚ್ 2 ರಂದು ಬೊಂಬಾಯಿ ಬಂದ್‌ಗೆ ಶಿವಸೇನಾ ನಾಯಕ ಬಾಲ ಥ್ಯಾಕರೆ ಕರೆ ಕೊಟ್ಟಿರುವರು.

★

ಅಧ್ಯಕ್ಷರ ಆಳ್ವಿಕೆ

ಲಕ್ನೊ— ಉತ್ತರ ಪ್ರದೇಶದಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆ ಅನಿವಾರ್ಯವಾದುದೇ ದು ಹೇಳಲಾಗುತ್ತಿದೆ.

○

ಹೊರಟುಹೋದರು

ನವದೆಹಲಿ— ನಿನ್ನೆ ಖಾನ್ ಅಬ್ದುಲ್ ಗಫಾರ ಖಾನರವರು ಕಾಬೂಲಿಗೆ ಪ್ರಯಾಣ ಮಾಡಿದರು – ಅವರನ್ನು ಬೀಳ್ಕೊಡಲಾಯಿತು.

★

ರಾಜರು ಕೊಟ್ಟ ನಿಧಿ

ನವದೆಹಲಿ— ರಾಜರ ಸಂಘವು ಬಾದಷಾ ಖಾನರಿಗೆ ರೂ 40001 ಕೊಟ್ಟತು.

○

ಕಲ್ಲುಗಳನ್ನು ಕಳಿಸಲು ರೂ 33 ಖರ್ಚು

ಸೇಲಂ— ಮೈಸೂರು ರಾಜ್ಯದಲ್ಲಿ ತಮ್ಮ ಮೇಲೆ ಎಸೆದ 7 ಕಲ್ಲುಗಳನ್ನು ಹಳೇ ಕಾಂಗ್ರೆಸ್ ಯುವಕ ನಾಯಕಿ ತಾರಕೇಶ್ವರಿ ಸಿನ್ಹರು ವಿಮಾನದಲ್ಲಿ ರೂ 33 ಚಾರ್ಜು ಕೊಟ್ಟು ಪ್ರಧಾನಿಯವರಿಗೆ ಕಳಿಸಿದುದಾಗಿ ಹೇಳಿದರು.

——

ಭೂಪಾಲ್— ರಾಜರಿಗೆ ನೃಪೆಯಾಗದಂತೆ ರಾಜಧನ ರದ್ದು ಪಡಿಸಲು ಸಾಧ್ಯವಾಗಬೇಕೆಂದು ಹಳೇ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪ ಹೇಳಿದರು.

ಭಾರತಕ್ಕೆ ಬರುತ್ತಿರುವ ಪಾಕಿಸ್ತಾನಿಗಳು

ಪ್ರತಿದಿನವೂ ಅನೇಕ ಪಾಕಿಸ್ತಾನಿಗಳು ಅಸ್ಸಾಮನ್ನು ನ್ಯಾಯಬಾಹಿರವಾಗಿ ಪ್ರವೇಶಿಸುತ್ತಿರುವುದಾಗಿ ಗೊತ್ತಾಗಿದೆ. 1969 ರ ಜನವರಿಯಿಂದ ನವೆಂಬರ್ ವರೆಗೆ 1327 ಪಾಕಿಸ್ತಾನಿಗಳು ಅಸ್ಸಾಂ ಪ್ರವೇಶಿಸಿದರು (ಅಸ್ಸಾಂ ಪ್ರವೇಶಿಸುವಾಗ ಪೋಲೀಸರು ಹಿಡಿದ ಪಾಕಿಸ್ತಾನಿಗಳ ಸಂಖ್ಯೆ ಇದರಲ್ಲಿ ಸೇರಿಲ್ಲ) : ಈ ಪೈಕಿ 2266 ಮಂದಿಯನ್ನು ಹಿಂದಕ್ಕೆ ತಳ್ಳಲಾಯಿತು. ಮಿಕ್ಕವರು 1917 ಮುಂದಿ ಪಾಕಿಸ್ತಾನಿಗಳೇ ಆಲ್ಲವೇ ಎಂಬುದನ್ನು ವಿಚಾರಣೆ ನಡೆಸಲಾಗುತ್ತಿದೆ, ಮತ್ತು ಅವರು ಪಾಕಿಸ್ತಾನಿಗಳೆಂದು ಕಂಡುಬಂದರೆ ಹಿಂದಕ್ಕೆ ಅಟ್ಟಲಾಗುವುದು. ಸರ್ಕಾರಿ ವಾರ್ತೆಯಂತೆ ಕಳೆದ 9 ವರ್ಷಗಳಲ್ಲಿ ಅಸ್ಸಾಮಿಗೆ 235841 ಪಾಕಿಸ್ತಾನಿಗಳು ನ್ಯಾಯಬಾಹಿರವಾಗಿ ಪ್ರವೇಶಿಸಿದರು. (ಅಸ್ಸಾಂ ಪತ್ರಿಕೆಯಿಂದ)

ಒಳ್ಳೆ ಯೋಜನೆ

ಪಾಟ್ನಾ— ಪ್ರಖ್ಯಾತ ನೇತ್ರ ವೈದ್ಯರಾದ ಡಾ॥ ಧುರ್ಜಾರಾಂರವರು, ದೇಶಾದ್ಯಂತ ಪ್ರತಿ ಅವಶ್ಯಕವಿರುವ ಮನುಷ್ಯನಿಗೂ ನೇತ್ರ ಚಿಕಿತ್ಸೆ ದೊರೆಯುವಂತೆ ಸುಚಾರಿ ನೇತ್ರ ಚಿಕಿತ್ಸಾ ಆಸ್ಪತ್ರೆಗಳನ್ನು ಸ್ಥಾಪಿಸಿಲು ಸಲಹೆಮಾಡಿರುವರು

ನಿಯಟ್ನಾಂನಲ್ಲಿ ಹಿಂದೂ ದೇವಸ್ಥಾನಗಳು

ವಿಯಟ್ನಾಮಿನ ಸೈಗಾನ್ ಪಟ್ಟಣದಲ್ಲಿ ದಕ್ಷಿಣ ಭಾರತದ ದೇವಾಲಯಗಳಿವೆ. ಶಿವನ, ಮುರುಗ್ (ಸುಬ್ರಹ್ಮಣ್ಯ), ಕಾಳಿ ಅಮ್ಮನ (ದುರ್ಗಾ) ದೇವಸ್ಥಾನಗಳಿವೆ. ವಿಯಟ್ನಾಂ ಸಾರ್ವಜನಿಕರನ್ನು ಈ ದೇವಾಲಯಗಳು ಆಕರ್ಷಿಸುತ್ತಿವೆ.

ನಿರುದ್ಯೋಗ ಇಷೂರೆನ್ಸ್

ಹೈದರಾಬಾದು— ನಿರುದ್ಯೋಗಿಗಳಿಗೆ ಸಹಾಯಕವಾಗಿ ನಿರುದ್ಯೋಗ ಇಷೂರೆನ್ಸನ್ನು ಜಾರಿಗೆ ತರಲು ಕೇಂದ್ರ ಸರಕಾರವನ್ನು ಹಳೇ ಕಾಂಗ್ರೆಸ್ಸಿನ ಯುವಕ ತಂಡ ಒತ್ತಾಯ ಮಾಡಿದೆ.

Help The Gorakshana



Protect the Cow

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಕಚ್ಚೆ ಚಾಚ್ಚಾಗಿ ನಡೆಯಲೀ
ಗೋರಕ್ಷಣೆಗೆ ಬೆಂಬಲ ನೀಡಿ

ಅಖಿಲ ಭಾರತದಲ್ಲಿ ಕೂಡಲೇ
ಗೋವಧೆ ನಿಷೇಧವಾಗಲಿ

Quality Printing — Neat Binding

Lakshminarasimha Press

Sivarampet, Mysore

ಪುಟ್ಟಲಂಡ್ ಅಮೋಘ 6 ನೇ ವಾರ
ಶನಿ ಅಮೋಘ ಪ್ರಾರಂಭ

.... ನೂಕುನುಗ್ಗಲಲ್ಲಿ ಜನ ಬಂದು ನೋಡುತ್ತಿರುವರು ....

ಒಂದ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆ ಪೂಜೆ

ನಟವರ್ಗ— ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಢರಿಬಾಯಿ

[ದಿನ 3 ಪ್ರದರ್ಶನಗಳು]

ಆಪೆರಾ— 6-2-70 ರಿಂದ

.... ಅತ್ಯಮೋಘ ಹಿಂದಿ ಚಿತ್ರ ....

ಪಾರ್ ಹಿ ಪಾರ್

ಶನಿ ಎ

ಪಾತ್ರ – ವೈಜಯಂತಿ ಮಾಲ ಧನೇಂದ್ರ

ದಿನ 3 ಆಟಗಳು

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂ

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಸಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.

3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿಡಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು
ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು 4

SHAKTI SUDHA

A Superb Tonic

Edited Printed Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4